18398 16/2/17

ಕುಂದಾಪುರ

ಪ್ರೀತಿಯ ಆಂಟಿಗೆ,

ನಿಮ್ಮ ಮಾಡುವ ವಂದನೆಗಳು ಹಾಗೂ ಬೇಡುವ ಆಶೀರ್ವಾದಗಳು. ನಾನು ನನ್ನ ಮನೆಯವರು ಆರೋಗ್ಯವಾಗಿದ್ದಾರೆ. ನೀವೂ ನಿಮ್ಮ ಮನೆಯವರು ಕೂಡ ಆರೋಗ್ಯವಾಗಿದ್ದೀರೆಂದು ಭಾವಿಸುತ್ತೇನೆ.

ಈಗ ನನ್ನ ಮೂರನೇ ಶೈಕ್ಷಣಿಕ ವರ್ಷವು ನಡೆಯುತ್ತಿದೆ. ಸೆಪ್ಟೆಂಬರ್ ತಿಂಗಳಲ್ಲಿ 3ನೇ ವರ್ಷವು ಮುಗಿಯುತ್ತದೆ. ಎರಡನೇ ವರ್ಷದ ಫಲಿತಾಂಶವು ಬರಲಿದೆ. ಅದು ಈ ತಿಂಗಳ ಕೊನೆಯಲ್ಲಿ ಬರುತ್ತದೆ ಎಂದು ಹೇಳುತ್ತಾರೆ.

ಈಗ ನಮಗೆ ಜನವರಿಯಿಂದ ಮೇ ತಿಂಗಳ ತನಕ ಆಸ್ಪತ್ರೆಯಲ್ಲಿ ಕಲಿಯಲು ಹಾಕಿದ್ದಾರೆ. ಬೆಳಗ್ಗೆ 8:30 ಯಿಂದ ಮಧ್ಯಾಹ್ನ 12:30 ತನಕ ಆಸ್ಪತ್ರೆಯಲ್ಲಿ ಮತ್ತು ಮಧ್ಯಾಹ್ನ 2ರಿಂದ 5ರ ತನಕ ತರಗತಿಗಳು ನಡೆಯುತ್ತಿವೆ. ತರಗತಿಗಳು ಚೆನ್ನಾಗಿ ನಡೆಯುತ್ತಿವೆ.

ಜನವರಿ 11ರಂದು ನಮ್ಮ ಇಗರ್ಜಿಯ ಹಬ್ಬವಿತ್ತು. ಮನೆಯಲ್ಲಿ ಹಬ್ಬದ ಊಟ ಮಾಡಿದ್ದರು. ಖುಷಿಯಾಗಿ ಹಬ್ಬವನ್ನು ಆಚರಿಸಿದ್ದೆವು.

ಡಿಸೆಂಬರ್‌ನಲ್ಲಿ ನೀವು ಕ್ರಿಸ್ಮಸ್ ಗಿಫ್ಟನ್ನು ಮತ್ತು ಕೇಕನ್ನು ಕೊಟ್ಟಿದ್ದಿರಿ. ತುಂಬಾ ಸಂತೋಷವಾಯಿತು. ಕ್ರಿಸ್ಮಸ್‌ಗೆ ನಾವು ಕ್ರಿಯೇಟಿವ್ ಕ್ರಿಬ್ಬನ್ನು ಮಾಡಿದ್ದೆವು. ಮತ್ತು ದೊಡ್ಡದಾದ ನಕ್ಷತ್ರವನ್ನು ಹಾಕಿದ್ದೆವು. ಮತ್ತು ಸಂಜೆ ಚರ್ಚಿಗೆ ಹೋಗಿದ್ದೆವು. ಈ ಬಾರಿ ಕ್ರಿಸ್ಮಸ್ [illegible] ಆಚರಿಸಿದೆವು.




ನಮಗೆ ಮೇ ತಿಂಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಆಸ್ಪತ್ರೆಯಲ್ಲಿ ಕಲಿಯಲು ಹೋಗಲಿಕ್ಕೆ ಇರುತ್ತದೆ. ಪ್ರೈವೇಟ್ ಆಸ್ಪತ್ರೆಗೆ ಹೋಗಲು ಇದೆ. ಒಂದು ತಿಂಗಳು ಅಲ್ಲಿ ಇರಲಿಕ್ಕೆ ಇದೆ. ನಮಗೆ ಹೋಗಲು ಬಹಳ ಕುತೂಹಲವಿದೆ.

ನಂತರ ಜೂನ್‌ನಿಂದ ಕೇವಲ ತರಗತಿಗಳು ನಡೆಯುತ್ತವೆ. ನಮಗೆ ಈಗ ಪ್ರಾಕ್ಟಿಕಲ್ ಎಕ್ಸ್‌ಪೀರಿಯನ್ಸ್ ಆಗುತ್ತಿದೆ.

ಜನವರಿ 7 ರಂದು ನಮಗೆ ಕ್ರೀಡಾ ದಿನವನ್ನು ಏರ್ಪಡಿಸಿದ್ದರು. ನಾನು ಮತ್ತು ನನ್ನ ಗೆಳೆಯರು ಕ್ರೀಡೆಯಲ್ಲಿ ಭಾಗವಹಿಸಿದ್ದೆವು. ರಿಲೇ ಮತ್ತು ತ್ರೋಬಾಲ್‌ನಲ್ಲಿ. ಆದರೆ ಬಹುಮಾನ ಸಿಗಲಿಲ್ಲ. ಆದರೆ ತುಂಬಾ ಮನರಂಜನೆ ಸಿಕ್ಕಿತ್ತು. ನಂತರ ಮಧ್ಯಾಹ್ನದ ನಂತರ ನಾವು ಪಾರ್ಕಿಗೆ ತಿರುಗಾಡಲು ಹೋಗಿದ್ದೆವು. ಅಂದು ನಮಗೆ ಶಾಲೆಯಿಂದ ಉತ್ತಮ ಊಟವನ್ನು ಕೊಡಲಾಗಿತ್ತು.

ನಮಗೆ ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್‌ಗೆ 10 ದಿನ ರಜೆಯನ್ನು ಕೊಟ್ಟಿದ್ದರು. ನಾನು ಮತ್ತು ಇಬ್ಬರು ಸ್ನೇಹಿತೆಯರು ಸೇರಿ ಮಂಗಳೂರಿಗೆ ಒಂದು ದಿನ ಹೋಗಿದ್ದೆವು. ಮಾನಸ ಸರೋವರ ಪಾರ್ಕ್‌ಗೆ ಹೋಗಿದ್ದೆವು. ತುಂಬಾ ಖುಷಿಯಾಗಿತ್ತು. ಇನ್ನು ನಮಗೆ ರಜೆಯಿಲ್ಲ. ಮುಂದೆ ಈಸ್ಟರ್‌ಗೆ ಸ್ವಲ್ಪ ದಿನ ಬರಬಹುದು. ನಿಮಗೆ ಕೃತಜ್ಞತೆ ಹೇಳುತ್ತೇನೆ. ನಿಮ್ಮ ಪತ್ರವನ್ನು ಆಶಿಸುತ್ತೇನೆ. ನಿಮಗೆ ಮತ್ತು ಕುಟುಂಬದವರಿಗೆ ಈಸ್ಟರ್ ಹಬ್ಬದ ಶುಭಾಶಯಗಳು.

ಇತಿ, ನಿಮ್ಮ ಪ್ರೀತಿಯ,
ವಿಲ್ಮ ಡಿಸೋಜ
Wilma Dsouza

